ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 14/03/2019


## ಶಾಸಕರ ವಿರುದ್ಧ ಸ್ಪೀಕರ್ ಅಫಿಡವಿಟ್ | ಸುಪ್ರೀಂಗೆ ಮಾಹಿತಿ

# ಕೋರ್ಟ್ ದಿಕ್ಕು ತಪ್ಪಿಸಿದ್ರು..

14-3-19

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜೀನಾಮೆ ನೀಡಿರುವ ಶಾಸಕರು ನ್ಯಾಯಾಲಯದ ದಿಕ್ಕು ತಪ್ಪಿಸಿದ್ದಾರೆ ಎಂದು ಸ್ಪೀಕರ್ ಕೆ.ಆರ್. ರಮೇಶ್‌ಕುಮಾರ್ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಸುಪ್ರೀಂಕೋರ್ಟ್‌ಗೆ ದಾಖಲೆಗಳು ಹಾಗೂ ಶಾಸಕರು ರಾಜೀನಾಮೆ ಸಲ್ಲಿಸಿದ ದಿನ ತೆಗೆದ ವಿಡಿಯೋ ಸಿಡಿಯೊಂದಿಗೆ 18 ಪುಟಗಳ ಪ್ರಮಾಣಪತ್ರವನ್ನು ಸ್ಪೀಕರ್ ಸಲ್ಲಿಸಿದ್ದಾರೆ. ರಾಜ್ಯಪಾಲರ ಪತ್ರ ಹಾಗೂ ಅದಕ್ಕೆ ನೀಡಿರುವ ಉತ್ತರಗಳನ್ನು ಲಗತ್ತಿಸಿದ್ದಾರೆ.



ರಾಜೀನಾಮೆ ಸಲ್ಲಿಸಲು ಹೋದ ಸಂದರ್ಭ ಸ್ಪೀಕರ್ ಕೈಗೆ ಸಿಗದೆ ಖಾಸಗಿ ಕಾರಿನಲ್ಲಿ ಹೋದರೆಂದು ಶಾಸಕರು ನ್ಯಾಯಾಲಯಕ್ಕೆ ತಿಳಿಸಿರುವುದು ಸುಳ್ಳಿನಿಂದ ಕೂಡಿದೆ. ಅಂದು ನಾನು 12.30ರ ತನಕ ಕಚೇರಿಯಲ್ಲಿಯೇ ಇದ್ದೆ. ಯಾರೊಬ್ಬರೂ ನನ್ನ ಸಮಯ ಕೇಳಿರಲಿಲ್ಲ. 2.30ರ ಸುಮಾರಿಗೆ ಬಂದು ರಾಜೀನಾಮೆ ಸಲ್ಲಿಸಿದ್ದಾರೆ. ನನ್ನ ಕಚೇರಿ ಸಿಬ್ಬಂದಿ ಮೂಲಕ ಸ್ವೀಕೃತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.



**ರಾಜೀನಾಮೆ ವಾಪಸ್ ಪಡೆದು ಮತ್ತೆ ಕಾಂಗ್ರೆಸ್‌ಗೆ ಹೋಗುವುದಿಲ್ಲ. ನಮ್ಮ ನಿರ್ಧಾರ ಅಚಲವಾಗಿದೆ. ಯಾವುದೇ ಆಮಿಷಗಳಿಗೂ ನಾವು ಬಲಿಯಾಗುವುದಿಲ್ಲ.**

**| ಬಿ.ಸಿ.ಪಾಟೀಲ್**
**ಹಿರೇಕೆರೂರ್ ಶಾಸಕ**

ಕರ್ನಾಟಕದಲ್ಲಿ ಶಾಸಕರ ರಾಜೀನಾಮೆ ವಿಚಾರ ಫೆಬ್ರವರಿಯಿಂದ ನಡೆಯುತ್ತಿದೆ. ರಮೇಶ್ ಜಾರಕಿಹೊಳಿ ಹಾಗೂ ಮಹೇಶ್ ಕುಮಠಳ್ಳಿ ವಿರುದ್ಧ ಕಾಂಗ್ರೆಸ್ ಪಕ್ಷ ಅನರ್ಹತೆಯ ದೂರನ್ನು ಫೆ.11ರಂದು ಸಲ್ಲಿಸಿದೆ. ಅವರಿಗೆ ನೋಟಿಸ್ ನೀಡಲಾಗಿದೆ. ಜು.11ಕ್ಕೆ ವಿಚಾರಣೆ ನಿಗದಿ ಮಾಡಲಾಗಿತ್ತು. ಜು.1ರಂದು ಆನಂದಸಿಂಗ್ ಬಂದು ರಾಜೀನಾಮೆ ಸಲ್ಲಿಸಿದ್ದರು. ಅವರ ರಾಜೀನಾಮೆಯನ್ನು ಕಾನೂನು ಪ್ರಕಾರ ವಿಚಾರಣೆ ಮಾಡುವುದಾಗಿ ಹೇಳಿದ್ದೇನೆ. ಜು.6ರಂದು 12 ಶಾಸಕರು ರಾಜೀನಾಮೆ ಸಲ್ಲಿಸಿದ್ದಾರೆ. ಈ 13 ರಾಜೀನಾಮೆಗಳ ವಿಚಾರದಲ್ಲಿ ರಾಜ್ಯಪಾಲರು ಸಹ ಪತ್ರ ಬರೆದಿದ್ದರು. ಅವರಿಗೂ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಾಗಿ ಉತ್ತರ ಬರೆಯಲಾಗಿದೆ. ರಾಜೀನಾಮೆಗಳನ್ನು ಜು.9ರಂದು ಪರಿಶೀಲನೆ ಮಾಡಿದ್ದೇನೆ. ಅದರಲ್ಲಿ ಕ್ರಮಬದ್ಧವಾಗಿದ್ದ ಆನಂದಸಿಂಗ್, ನಾರಾಯಣಗೌಡ ಹಾಗೂ ಪ್ರತಾಪಗೌಡ ಅವರಿಗೆ ಜು.12ರಂದು ಹಾಗೂ ಗೋಪಾಲಯ್ಯ ಮತ್ತು ರಾಮಲಿಂಗಾರೆಡ್ಡಿ ಅವರಿಗೆ ಜು.15ರಂದು ವಿಚಾರಣೆಗೆ ಸಮಯ ನಿಗದಿ ಮಾಡಲಾಗಿದೆ. ಉಳಿದವರಿಗೆ ಕ್ರಮಬದ್ಧವಾದ ರಾಜೀನಾಮೆ ಪತ್ರ ಕಳುಹಿಸುವಂತೆ ಜು.10ರಂದು ಪತ್ರ ಬರೆದಿದ್ದೇನೆ ಎಂದು ವಿವರಿಸಿದ್ದಾರೆ. ಜು.11ರಂದು ಸಂಜೆ 6.15ಕ್ಕೆ ಬಂದು ಕ್ರಮಬದ್ಧ ರಾಜೀನಾಮೆ ಪತ್ರಗಳನ್ನು ಸಲ್ಲಿಸಿದ್ದಾರೆ. ಆದರೆ ಅಂದು ಮಧ್ಯಾಹ್ನವೇ ಈ ಶಾಸಕರ ವಿರುದ್ಧ ಪಕ್ಷಾಂತರ ನಿಷೇಧ ಕಾಯ್ದೆಯಡಿ ಅನರ್ಹತೆಯ ದೂರು ದಾಖಲಾಗಿದೆ. 10ನೇ ಷೆಡ್ಯೂಲ್ ಪ್ರಕಾರ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಲಿದ್ದೇನೆ. ಇಂತಹದ್ದೇ ಎಸ್‌ಎ ಸಂಪತ್‌ಕುಮಾರ್ ವರ್ಸಸ್ ಕಾಳೆಯಾಡಯ್ಯ ಪ್ರಕರಣದಲ್ಲಿ ನ್ಯಾಯಾಲಯ ನೀಡಿರುವ ತೀರ್ಪನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು. ನಾನು ಸಂವಿಧಾನದ ಆಶಯಗಳಿಗೆ ತಕ್ಕಂತೆ ಕೆಲಸ ಮಾಡುತ್ತೇನೆ. ಕಾನೂನುಮೀರಿ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

### ಮಾಹಿತಿ ಇದೆ

**ಶಾಸಕರನ್ನು ಭೇಟಿ ಮಾಡಲಾರೆ ಎಂದಿರಲಿಲ್ಲ. ರಾಜೀನಾಮೆ ಸಂಬಂಧ ಶಾಸಕರು ಮೊದಲಿಗೆ ಮಾಹಿತಿಯೇ ನೀಡಿರಲಿಲ್ಲ. ಆದರೆ, ನಾನು ಕಚೇರಿಯಿಂದ ತಪ್ಪಿಸಿಕೊಂಡು ಹೋದೆ ಎಂದು ಅರ್ಜಿಯಲ್ಲಿ ದಾಖಲು ಮಾಡಿರುವುದು ಸತ್ಯಕ್ಕೆ ದೂರ ಎಂದು ಸ್ಪೀಕರ್ ಸ್ಪಷ್ಟಪಡಿಸಿದ್ದಾರೆ. ವಾಸ್ತವದಲ್ಲಿ, ಈ ಶಾಸಕರು ಸುಪ್ರೀಂಗೆ ದೂರು ನೀಡಿರುವ ಕುರಿತ ಅರ್ಜಿಯನ್ನು ನಾನು ಜಾಲತಾಣದಲ್ಲಿ ಪಡೆದಿದ್ದೇನೆ ಎಂದು ವಕೀಲರೊಬ್ಬರು ತಿಳಿಸಿದ್ದಾರೆ.**

## ಮತ್ತೆ ಐವರು ಅತೃಪ್ತ ಶಾಸಕರು ಸುಪ್ರೀಂಗೆ

**ನವದೆಹಲಿ:** 10 ಬಂಡಾಯ ಶಾಸಕರು ಸ್ಪೀಕರ್ ವಿರುದ್ಧ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ಮಂಗಳವಾರಕ್ಕೆ ನಿಗದಿಯಾಗಿರುವ ಬೆನ್ನಲ್ಲೇ ಶನಿವಾರ ಮತ್ತೈವರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ. ಕಾಂಗ್ರೆಸ್ ಶಾಸಕ ರಾಮಲಿಂಗಾರೆಡ್ಡಿ ಹೊರತುಪಡಿಸಿ ರಾಜೀನಾಮೆ ಸಲ್ಲಿಸಿರುವ ಆನಂದ್ ಸಿಂಗ್, ಎಂಟಿಬಿ ನಾಗರಾಜ್, ಡಾ.ಕೆ.ಸುಧಾಕರ್, ಮುನಿರತ್ನ ಮತ್ತು ರೋಷನ್ ಬೇಗ್ ಮಧ್ಯಂತರ ಅರ್ಜಿ ಸಲ್ಲಿಸಿದ್ದಾರೆ. ನಮ್ಮ ರಾಜೀನಾಮೆಗಳನ್ನು ಸ್ಪೀಕರ್ ಉದ್ದೇಶಪೂರ್ವಕವಾಗಿಯೇ ಸ್ವೀಕರಿಸುತ್ತಿಲ್ಲ ಎಂದು ದೂರಿರುವ ಶಾಸಕರು, 10 ಶಾಸಕರ ಮೂಲ ಅರ್ಜಿಯ ಜತೆ ನಮ್ಮ ಅರ್ಜಿಗಳನ್ನೂ ಸೇರಿಸಿ ವಿಚಾರಣೆ ನಡೆಸಬೇಕೆಂದು ಕೋರಿದ್ದಾರೆ. ರಾಜ್ಯದ ಮುಖ್ಯಮಂತ್ರಿ ವಿಧಾನಸಭೆಯಲ್ಲಿ ವಿಶ್ವಾಸಮತ ಸಾಬೀತಿಗೆ ಮುಂದಾಗಿದ್ದಾರೆ. ನಾವು ರಾಜೀನಾಮೆ ನೀಡಿದ್ದರೂ, ಸರ್ಕಾರಕ್ಕೆ ಬೆಂಬಲ ನೀಡದಿದ್ದರೆ ಅನರ್ಹಗೊಳಿಸುವ ಬೆದರಿಕೆ ಹಾಕಲಾಗುತ್ತಿದೆ. ಸ್ವಯಂಪ್ರೇರಿತವಾಗಿ ರಾಜೀನಾಮೆ ನೀಡುವ ಎಲ್ಲ ಹಕ್ಕು ನಮಗಿದೆ. ನಮ್ಮ ಈ ಹಕ್ಕುಗಳನ್ನು ಸ್ಪೀಕರ್ ಕಸಿದುಕೊಳ್ಳುತ್ತಿದ್ದಾರೆ ಎಂದು ಶಾಸಕರು ದೂರಿದ್ದಾರೆ. ಮಂಗಳವಾರದ ವಿಚಾರಣೆಗೆ ಸುಪ್ರೀಂಕೋರ್ಟ್ ಕೇಸುಗಳ ಪಟ್ಟಿ ಸಿದ್ಧಗೊಂಡಿದ್ದು, ಅತೃಪ್ತ ಶಾಸಕರ ಅರ್ಜಿ ಜತೆಗೆ ಐವರು ಶಾಸಕರು ಸಲ್ಲಿಸಿದ ಮಧ್ಯಂತರ ಅರ್ಜಿಯನ್ನೂ ಸೇರಿಸಿಕೊಳ್ಳಲಾಗಿದೆ ಎಂದು ವಕೀಲರೊಬ್ಬರು ತಿಳಿಸಿದ್ದಾರೆ.

## ಆತ್ಮಸಾಕ್ಷಿ ಇದ್ದರೆ ಸಿಎಂ ರಾಜೀನಾಮೆ ಕೊಡಲಿ

ಮುಖ್ಯಮಂತ್ರಿ ಕುಮಾರಸ್ವಾಮಿ ಅವರಿಗೆ ಆತ್ಮಸಾಕ್ಷಿ ಇದ್ದರೆ ಕೂಡಲೇ ರಾಜೀನಾಮೆ ಕೊಟ್ಟು ಹೋಗಲಿ ಎಂದು ಪ್ರತಿಪಕ್ಷದ ನಾಯಕ ಬಿ.ಎಸ್.ಯಡಿಯೂರಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ವಿಶ್ವಾಸಮತ ಯಾಚನೆ ಮಾಡುವುದಾಗಿ ಹೇಳಿರುವುದನ್ನು ಸ್ವಾಗತಿಸುತ್ತೇನೆ. ಆದರೆ ಈಗ ವಿಶ್ವಾಸಮತ ಯಾಚನೆಯ ಪರಿಸ್ಥಿತಿ ಉಳಿದಿಲ್ಲ ಎಂದರು. ಸರ್ಕಾರ ಬಹುಮತ ಕಳೆದುಕೊಂಡಿದೆ. ಬಿಜೆಪಿ ಪರ ವಾತಾವರಣ ನಿರ್ಮಾಣವಾಗಿದೆ. ಆದರೆ ವಿಶ್ವಾಸಮತ ಯಾಚಿಸುತ್ತೇನೆಂಬ ಅವರ ಧೈರ್ಯ ಮೆಚ್ಚುತ್ತೇನೆ. ಆದರದು ಸಫಲವಾಗುವುದಿಲ್ಲವೆಂದು ಲೇವಡಿ ಮಾಡಿದರು. ಮುಂಬೈನಲ್ಲಿರುವ ಶಾಸಕರಲ್ಲಿ ಗೊಂದಲ ಮೂಡಿಸುವ ಉದ್ದೇಶದಿಂದಲೇ ವಿಶ್ವಾಸಮತ ಯಾಚನೆ ನಾಟಕವಾಡುತ್ತಿದ್ದಾರೆ. ಆದರೆ ಕಾಲ ಮಿಂಚಿ ಹೋಗಿದೆ ಎಂದರು. ರಾಜ್ಯದಲ್ಲಿ ಭೀಕರ ಬರ ಇದೆ, ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇಂತಹ ಸಂದರ್ಭದಲ್ಲಿ ಮುಖ್ಯಮಂತ್ರಿ ಆ ಕಡೆ ಗಮನ ಹರಿಸುತ್ತಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

